## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ.151/2023

| | | | |
|---|---|---|---|
| ಸಾಕ್ಷಿಧಾರರ ಹೆಸರು | : | ವಿಠಲ ಸೂರ್ಯವಂಶಿ | ಪಿಡಬ್ಲ್ಯೂ 3 |
| ತಂದೆ:ಗಂಡನ ಹೆಸರು | : | ಮಾರುತಿ | ಸಿಡಬ್ಲ್ಯೂ 3 |
| ವಯಸ್ಸು | : | 29 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಹಾನಗಲ್ | |

ದಿನಾಂಕ 19-03-2024 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಸಾಕ್ಷಿ ನಿ ಪಿ 1 ರ ಮಹಜರು, ನಿ ಪಿ 2 ರ ಶೋಧನಾ ಸಮುಚಿತ ಆಧಾರ ವರದಿ, ನಿ ಪಿ 3 ರ ಸ್ವತ್ತುಗಳ ಪಟ್ಟಿ, ನಿ ಪಿ 4 ರ ಮಾದರಿ ಮೊಹರಿನ ಚೀಟಿಗಳಲ್ಲಿ ತನ್ನ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 1(ಸಿ) ಯಿಂದ ನಿ ಪಿ 4(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಸುಮಾರು ಆರು ತಿಂಗಳ ಹಿಂದೆ ಅಬಕಾರಿ ಕಚೇರಿಯಲ್ಲಿ ಹಾಕಿದ್ದೇನೆ. ನಿ ಪಿ 1 ರಿಂದ 4 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಅಬಕಾರಿ ಅಧಿಕಾರಿಗಳು ಯಾವುದೇ ಮುದ್ದೆಮಾಲನ್ನು ಜಪ್ತಿ ಮಾಡಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 1 ನ್ನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

**20-9-2022** ರಂದು ಅಬಕಾರಿ ಅಧಿಕಾರಿಗಳು ನನ್ನ ಮತ್ತು ಚಾ ಸಾ 2 ರವರ ಸಮಕ್ಷಮ ಹಾನಗಲ್ - ತಡಸ ರಾಜ್ಯ ಹೆದ್ದಾರಿ ಪಕ್ಕದಲ್ಲಿರುವ ಶ್ರೀ ರೇಣುಕಾ ದಾಬಾದ ಒಳಗೆ ಕ್ಯಾಶ ಕೌಂಟರ ಪಕ್ಕದಿಂದ ತಲಾ 90 ಎಮ್ ಎಲ್ ನ ಒಟ್ಟು 22 ಓರಿಜಿನಲ್

ಚಾಯ್ಸ ಕವಿಸ್ಕಿಯ ಟೆಟ್ರಾ ಪ್ಯಾಕುಗಳು, ತಲಾ 90 ಎಮ್ ಎಲ ನ ಒಟ್ಟು 12 ಓಲ್ಡ ಟಾವರಿನ ವಿಸ್ಕಿಯ ಟೆಟ್ರಾ ಪ್ಯಾಕುಗಳು, ತಲಾ 650 ಎಮ ಎಲ್ ನ ಒಟ್ಟು 14 ಟೋಬರಗ ಬಯರಿನ ಬಾಟಲಿಗಳು, ತಲಾ 330 ಎಮ ಎಲ್ ನ ಒಟ್ಟ 6 ನಾಕ ಔಟ್ ಹೈ ಪಂಚ್ ಬಿಯರ್ ಕ್ಯಾನುಗಳನ್ನು ಜಪ್ತಿಮಾಡಿಕೊಂಡು ಮಧ್ಯಾಹ್ನ 12-30 ರಿಂದ 1-30 ರವರೆಗೆ ನಿ ಪಿ 1 ರ ಮಹಜರು ಕ್ರಮ ಜರುಗಿಸಿ ಅದಕ್ಕೂ ಪೂರ್ವದಲ್ಲಿ ನಿ ಪಿ 2 ರ ಶತೋಧನಾ ಸಮುಚಿತ ಆಧಾರ ವರದಿ ತಯಾರಿಸಿ ನಂತರ ನಿ ಪಿ 3 ರ ಜಪ್ತಿ ಮಾಡಿಕೊಂಡ ವಸ್ತುಗಳನ್ನು ತಯಾರಿಸಿ, ನಿ ಪಿ 4 ರಂತೆ ಮಾದರಿ ಮೊಹರಿನ ಚೀಟಿಯನ್ನು ತಯಾರಿಸಿದರು ಎಂದರೆ ಸರಿಯಲ್ಲ. ನನಗೆ ನಿ ಪಿ 1 ರಿಂದ 4 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಹಾಗೂ ಮು ಮಾ 1 ನ್ನು ನೋಡಿ ಗುರುತಿಸಲು ಆಗುತ್ತಿದ್ದರೂ ಸಹ ಆರೋಪಿ ನನಗೆ ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್ ಕೆ ಕೆ ಪರ ಶ್ರೀ. ಪಿ ಎಮ್ ಜೆ ವಕೀಲರಿಂದ</u>

(ಇಲ್ಲ ಎನ್ನುತ್ತಾರೆ )

<u>: ಮರುವಿಚಾರಣೆ : ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್